## ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1241
2. ವಿಧಾನ ಪರಿಷತ್ತಿನ ಸದಸ್ಯರ ಹೆಸರು : ಶ್ರೀ ಮುನಿರಾಜು ಗೌಡ ಪಿ. ಎಂ.
3. ಉತ್ತರಿಸಬೇಕಾದ ದಿನಾಂಕ : 07.03.2022
4. ಉತ್ತರಿಸಬೇಕಾದ ಸಚಿವರು : ಮಾನ್ಯ ಜೀವಿಪರಿಸ್ಥಿತಿ ಮತ್ತು ಪರಿಸರ ಹಾಗೂ ಪ್ರವಾಸೋದ್ಯಮ ಸಚಿವರು

| ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಖಾಸಗಿ ಬಿಲ್ಡರ್/ಡೆವಲಪರ್ ಗಳಿಂದ ನಿರ್ಮಿಸಲಾಗುವ ವಸತಿ ಸಮುಚ್ಚಯಗಳಲ್ಲಿ ಎಷ್ಟು ಸಂಖ್ಯೆಯ ವಸತಿ ಘಟಕಗಳಿದ್ದರೆ ಅಂತಹ ವಸತಿ ಸಮುಚ್ಚಯಗಳಲ್ಲಿ ಕಡ್ಡಾಯವಾಗಿ (Sewage Treatment Plant) ಕೊಳಚೆ ನೀರು ಸಂಸ್ಕರಣ ಘಟಕಗಳನ್ನು ನಿರ್ಮಿಸಬೇಕಾಗುತ್ತದೆ. | ಸರ್ಕಾರದ ಅಧಿಸೂಚನೆ ಸಂಖ್ಯೆ: ಅಪಜೀ 316 ಇಪಿಸಿ 2015, ದಿನಾಂಕ 19.01.2016ರ ಅನುಸಾರ 20 ಹಾಗೂ ಮೇಲ್ಪಟ್ಟ ಘಟಕಗಳಿದ್ದರೆ ಅಂತಹ ವಸತಿ ಸಮುಚ್ಚಯಗಳಲ್ಲಿ ತ್ಯಾಜ್ಯ ಸಂಸ್ಕರಣಾ ಘಟಕಗಳನ್ನು ಅಳವಡಿಸುವುದು ಕಡ್ಡಾಯವಾಗಿದೆ. |
| ಆ) | ಈ ನಿಯಮವು ರಾಜ್ಯಕ್ಕೆ ಅನ್ವಯಿಸುತ್ತದೆಯೇ; | ಹೌದು. |
| ಇ) | ಕೊಳಚೆ ನೀರು ಸಂಸ್ಕರಣ ಘಟಕವನ್ನು ಖಾಸಗಿ ವಸತಿ ಸಮುಚ್ಚಯದ ಬಿಲ್ಡರ್/ಡೆವಲಪರ್‌ಗಳಿಂದ ನಿರ್ಮಿಸಿದ ನಂತರ ಅದನ್ನು ಕಾರ್ಯಾಚರಣೆಗೆ ಒಳಪಡಿಸಲು ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ತೀರುವಳಿ ಪತ್ರ (Clearance Certificate) ಪಡೆದುಕೊಳ್ಳುವುದು ಕಡ್ಡಾಯವೇ; | ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ತ್ಯಾಜ್ಯ ಸಂಸ್ಕರಣಾ ಘಟಕಗಳ ಅಳವಡಿಕೆಗೆ ಸ್ಥಾಪನಾ ಸಮ್ಮತಿ ಪತ್ರ (Consent for Establishment) ಹಾಗೂ ಅದನ್ನು ಕಾರ್ಯಾಚರಣೆಗೆ ಒಳಪಡಿಸಲು ಚಾಲನಾ ಸಮ್ಮತಿ ಪತ್ರ (Consent for Operation) ಪಡೆಯುವುದು ಕಡ್ಡಾಯವಾಗಿರುತ್ತದೆ. |
| ಈ) | ಎಸ್‌ಟಿಪಿ ಘಟಕವನ್ನು ಕಾರ್ಯಾಚರಣೆಗೆ ಒಳಪಡಿಸಲು ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ತಿರುವಳಿ ಪತ್ರ ನೀಡಿದ ನಂತರದಲ್ಲಿ ಎಸ್.ಟಿ.ಪಿ. ಘಟಕವು ಸಮರ್ಪಕವಾಗಿ | ತ್ಯಾಜ್ಯ ಸಂಸ್ಕರಣಾ ಘಟಕಗಳಿಗೆ ಸಮ್ಮತಿ ಪತ್ರವನ್ನು ನೀಡಿದ ನಂತರ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಕಾಲಕಾಲಕ್ಕೆ ಸದರಿ ಘಟಕಗಳನ್ನು ಪರಿವೀಕ್ಷಣೆ ನಡೆಸುತ್ತದೆ. |

<table>
<tr><td></td><td>ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಕಾಲಕಾಲಕ್ಕೆ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಪರಿಶೀಲನೆ ನಡೆಸಲಾಗುತ್ತದೆಯೇ;</td><td></td></tr>
<tr><td>ಉ)</td><td>ಹಾಗಿದ್ದಲ್ಲಿ ಪ್ರತಿ ಘಟಕದ ಕಾರ್ಯಾಚರಣೆಯನ್ನು ಎಷ್ಟು ದಿನಗಳ ಅವಧಿಗೆ ಒಮ್ಮೆ ಪರಿಶೀಲನೆ ಮಾಡಲಾಗುತ್ತದೆ?</td><td>ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ ನಿರ್ದೇಶನದಂತೆ ಕೆಳಕಂಡ ಅವಧಿಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವತಿಯಿಂದ ಪರಿಶೀಲನೆ ನಡೆಸಲಾಗುತ್ತದೆ.
<table>
<tr><td>ಬೃಹತ್ & ಮಧ್ಯಮ ಕೆಂಪು ವರ್ಗದ ಉದ್ದಿಮೆಗಳಿಗೆ</td><td>3 ತಿಂಗಳಿಗೊಮ್ಮೆ</td></tr>
<tr><td>ಸಣ್ಣ ಕೆಂಪು ವರ್ಗದ ಉದ್ದಿಮೆಗಳಿಗೆ</td><td>1 ವರ್ಷಕ್ಕೊಮ್ಮೆ</td></tr>
<tr><td>ಬೃಹತ್ & ಮಧ್ಯಮ ಕಿತ್ತಳೆ ವರ್ಗದ ಉದ್ದಿಮೆಗಳಿಗೆ</td><td>1 ವರ್ಷಕ್ಕೊಮ್ಮೆ</td></tr>
<tr><td>ಸಣ್ಣ ಕಿತ್ತಳೆ ವರ್ಗದ ಉದ್ದಿಮೆಗಳಿಗೆ</td><td>3 ವರ್ಷಗಳಿಗೊಮ್ಮೆ</td></tr>
<tr><td>ಬೃಹತ್ & ಮಧ್ಯಮ ಹಸಿರು ವರ್ಗದ ಉದ್ದಿಮೆಗಳಿಗೆ</td><td>2 ವರ್ಷಗಳಿಗೊಮ್ಮೆ</td></tr>
<tr><td>ಸಣ್ಣ ಹಸಿರು ವರ್ಗದ ಉದ್ದಿಮೆಗಳಿಗೆ</td><td>5 ವರ್ಷಗಳಿಗೊಮ್ಮೆ</td></tr>
</table>
</td></tr>
</table>

ಸಂಖ್ಯೆ: ಅಪಜೀ 65 ಇಪಿಸಿ 2022

(ಆನಂದ್ ಸಿಂಗ್)
ಜೀವಿಪರಿಸ್ಥಿತಿ ಮತ್ತು ಪರಿಸರ ಹಾಗೂ
ಪ್ರವಾಸೋದ್ಯಮ ಸಚಿವರು